## ಚಾಮರಾಜನಗರ ಹಾಗೂ ಇತರ ಮೈಸೂರು ಜಿಲ್ಲೆಯ ತಾಲ್ಲೂಕುಗಳಲ್ಲಿ ಕಪ್ಪು ಕಲ್ಲಿನ ಅಕ್ರಮ ಸಾಗಾಣಿಕೆ.

ಶ್ರೀ ಜಿ. ರಾಜೂಗೌಡ (ಚಾಮರಾಜನಗರ): ಕೊಳ್ಳೇಗಾಲ, ಹಾಗೂ ಯಳಂದೂರು ತಾಲ್ಲೂಕುಗಳಲ್ಲಿ ನಡೆಯುತ್ತಿರುವ ಕಪ್ಪು ಕಲ್ಲಿನ ಅಕ್ರಮ ಸಾಗಾಣಿಕೆ ಬಗ್ಗೆ ಸನ್ಮಾನ್ಯ ಅರಣ್ಯ, ಗಣಿ ಮತ್ತು ಭೂವಿಜ್ಞಾನ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್ (ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಸಚಿವರು).— ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಚಾಮರಾಜನಗರ ತಾಲ್ಲೂಕಿನಲ್ಲಿ ೧೯ ಗುತ್ತಿಗೆಗಳನ್ನು, ಕೊಳ್ಳೇಗಾಲ ತಾಲ್ಲೂಕಿನಲ್ಲಿ ೧೪ ಗುತ್ತಿಗೆಗಳನ್ನು ಮತ್ತು ಒಂದು ಗುತ್ತಿಗೆಯನ್ನು ಯಳಂದೂರು ತಾಲ್ಲೂಕಿನಲ್ಲಿ ಕಪ್ಪು ಕಲ್ಲಿಗಾಗಿ ಕೊಟ್ಟಿರುತ್ತದೆ. ಈ ೩೪ ಗುತ್ತಿಗೆಗಳ ಪೈಕಿ ೨೧ ಗುತ್ತಿಗೆಗಳನ್ನು ಮೈಸೂರು ಮಿನರಲ್ಸ್ ನಿಯಮಿತ, ಹೊಂದಿರುತ್ತದೆ. ಉಳಿದ ೧೩ ಗುತ್ತಿಗೆಗಳನ್ನು ಖಾಸಗಿಯವರಿಗೆ ಕೊಡಲಾಗಿದ್ದು, ಅವುಗಳನ್ನು ಕಪ್ಪು ಕಲ್ಲನ್ನು ಸರ್ಕಾರಕ್ಕಾಗಿ ಕಾಯ್ದಿರಿಸುವ ಮೊದಲೇ ಕೊಡಲಾಗಿರುತ್ತದೆ. ಕೆಲವು ಗುತ್ತಿಗೆಗಳನ್ನು ನವೀಕರಣಕ್ಕಾಗಿ ಬಂದಾಗ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಕೊಡಲಾಗಿರುತ್ತದೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಕೊಡುತ್ತಿರುವ ಗಣಿ ಗುತ್ತಿಗೆಗಳಲ್ಲದೆ, ಕಂದಾಯ ಇಲಾಖೆಯ ಅಧಿಕಾರಿಗಳು ಗುತ್ತಿಗೆ ಹಾಗೂ ಪರ್ಮಿಟ್‌ಗಳನ್ನು ಕರ್ನಾಟಕ ಮೈನರ್ ಮಿನರಲ್ ಕನ್ಸೆಷನ್ ನಿಯಮ ೧೯೬೯ರ ನಿಯಮ ೪೦ ಪ್ರಕಾರ ಕೊಳ್ಳೇಗಾಲ, ಚಾಮರಾಜನಗರ, ಮತ್ತು ಯಳಂದೂರು ತಾಲ್ಲೂಕುಗಳಲ್ಲಿ ಜನವರಿ ೧೯೮೬ ರಿಂದ ಕೊಡುತ್ತಿದ್ದಾರೆಂದು ವರದಿಯಾಗಿದೆ. ಸದರಿ ನಿಯಮದ ಪ್ರಕಾರ ಖಾಸಗಿ ಜಮೀನುಗಳಲ್ಲಿ ಹಿಂದಿನ ಮದ್ರಾಸು ಪ್ರಾಂತ್ಯದ ಪ್ರದೇಶಗಳಲ್ಲಿ ಕೊಡಬಹುದಾಗಿರುತ್ತದೆ. ಈ ಬಗ್ಗೆ ಒಂದು ನ್ಯಾಯಾಲಯದ ಆದೇಶವು ಸಹಾ ಆಗಿರುತ್ತದೆ. ಆದರೆ ಪ್ರಕಾರ ಕಂದಾಯ ಇಲಾಖೆಯ ಅಧಿಕಾರಿಗಳು ಮೈಸೂರು ಜಿಲ್ಲೆಯ ಖಾಸಗಿ ಜಮೀನುಗಳಲ್ಲಿ ಅಂದರೆ ಕೊಳ್ಳೇಗಾಲ ತಾಲ್ಲೂಕಿನಲ್ಲಿ ೩೬, ಚಾಮರಾಜನಗರ ತಾಲ್ಲೂಕಿನಲ್ಲಿ ೧, ಮತ್ತು ಯಳಂದೂರು ತಾಲ್ಲೂಕಿನಲ್ಲಿ ೧, ಗಣಿ ಗುತ್ತಿಗೆಯನ್ನು ಕಪ್ಪು ಕಲ್ಲು ತೆಗೆಯಲು ಕೊಟ್ಟಿರುತ್ತಾರೆ. ನಿಯಮ ೪೦ರ ವ್ಯಾಪ್ತಿಯು ಚಾಮರಾಜನಗರ ಮತ್ತು ಯಳಂದೂರು ತಾಲ್ಲೂಕುಗಳಿಗೆ ಲಾಭವಾಗುವುದಿಲ್ಲ ಮತ್ತು ಹಿಂದಿನ ಮದ್ರಾಸ್ ಪ್ರಾಂತಕ್ಕೆ ಸೇರಿದ ಪ್ರದೇಶಗಳ ಖಾಸಗಿ ಜಮೀನುಗಳಿಗೆ ಮಾತ್ರ ಲಾಭವಾಗುತ್ತದೆ. ಆದರೆ ಕಂದಾಯ ಇಲಾಖೆಯ ಅಧಿಕಾರಿಗಳು ಯಳಂದೂರು ಮತ್ತು ಚಾಮರಾಜನಗರ ತಾಲ್ಲೂಕಿನ ಪ್ರದೇಶಗಳಲ್ಲಿಯೂ ಸಹಾ ಪರವಾನಿಗಿ ಲೀಸ್‌ಗಳನ್ನು ಕೊಟ್ಟಿರುವುದು ಕಂಡು ಬಂದಿರುತ್ತದೆ. ವಿಚಾರಿಸಲಾಗಿ ಪ್ರಮಾದವಶಾತ್ ಕಂದಾಯ ಇಲಾಖೆಯ ಅಧಿಕಾರಿಗಳು ಈ ರೀತಿ ಪರವಾನಿಗಿಗಳನ್ನು/ಗುತ್ತಿಗೆಗಳನ್ನು ಕೊಟ್ಟಿರುವುದು ಕಂಡು ಬಂದಿರುತ್ತದೆ. ಕಂದಾಯ ಇಲಾಖೆಯ ಅಧಿಕಾರಿಗಳು ಇದನ್ನು ಸರಿಪಡಿಸಲು ಮತ್ತು ಈಗ ಪರಿಶೀಲನೆಯಲ್ಲಿರುವ ಅರ್ಜಿಗಳನ್ನು ನಿರಾಕರಿಸಲು ಕ್ರಮ ಕೈಗೊಂಡಿರುತ್ತಾರೆಂತಲೂ ಸಹಾ ತಿಳಿದು ಬಂದಿರುತ್ತದೆ. ಇತ್ತೀಚೆಗೆ ಮೈಸೂರು ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ಅನಧಿಕೃತವಾಗಿ ನಡೆಯುತ್ತಿರುವ ೭೫ ಕಲ್ಲುಗಣಿಗಳ ಮೇಲೆ ದಾಳಿ ಮಾಡಿ, ಚಾಮರಾಜನಗರ ತಾಲ್ಲೂಕಿನಲ್ಲಿ ಒಟ್ಟು ೩೮೦ ಕಡಿದ ಕಲ್ಲುಗಳನ್ನು ವಶಪಡಿಸಿಕೊಂಡಿರುತ್ತಾರೆಂದು ತಿಳಿದು ಬಂದಿರುತ್ತದೆ. ತಪ್ಪಿತಸ್ಥರ ಮೇಲೆ ಅವರು ಕಾಯಿದೆಯ ಪ್ರಕಾರ ಕ್ರಮ ಕೈಗೊಳ್ಳುತ್ತಿದ್ದು, ಕಲ್ಲಿನ ಬೆಲೆಯನ್ನು ಅಂದಾಜು ಮಾಡಿರುವುದಿಲ್ಲ.

ಕಂದಾಯ ಇಲಾಖೆಯ ಅಧಿಕಾರಿಗಳು ಅನಧಿಕೃತವಾಗಿ ಮೈಸೂರು ಜಿಲ್ಲೆಯಲ್ಲಿ ನಡೆಯುತ್ತಿರುವ ಕಲ್ಲುಗಣಿಗಳ ವಿರುದ್ಧ ಭೂಕಂದಾಯ ಕಾಯಿದೆಯ ಪ್ರಕಾರ ಕ್ರಮ ತೆಗೆದುಕೊಳ್ಳುತ್ತಿದ್ದು, ಈ ಬಗ್ಗೆ ಪೋಲಿಸರ ಸಹಾಯವನ್ನು ಸಹಾ ಪಡೆದಿದ್ದು, ಇನ್ನು ಮುಂದೆ ಅನಧಿಕೃತ ಕಲ್ಲುಗಣಿಗಳಿಗೆ ಪ್ರೋತ್ಸಾಹ ಕೊಡದಂತೆ ಗ್ರಾಮಸ್ಥರಿಗೂ ಸಹಾ ತಿಳಿವಳಿಕೆಯ ಬಗ್ಗೆ ಪ್ರಚಾರವನ್ನು ಮಾಡಲಾಗುತ್ತಿದೆ. ಕರ್ನಾಟಕ ಮೈನರ್ ಮಿನರಲ್ಸ್ ನಿಯಮದ ೫ನೇ ಅಧ್ಯಾಯದಲ್ಲಿರುವ ನಿಯಮಗಳಿಂದಾಗಿ ಸದರಿ ನಿಯಮದ ೩೨ ಪ್ರಕಾರ ಸರ್ಕಾರಕ್ಕಾಗಿ ಕಾಯ್ದಿರಿಸಿದ ಬಣ್ಣದ ಕಲ್ಲುಗಳನ್ನು ಕಂದಾಯ ಇಲಾಖೆಯ ಅಧಿಕಾರಿಗಳು ಖಾಸಗಿಯವರಿಗೆ ಗಣಿ ಗುತ್ತಿಗೆ ಕೊಡುವ ಪ್ರಸಂಗ ಉದ್ಭವಿಸಿದ್ದು, ಈ ದೋಷವನ್ನು ಹೋಗಲಾಡಿಸಲು ಮತ್ತು ಎಲ್ಲಾ ಗಣಿ ಗುತ್ತಿಗೆಗಳ ಬಗ್ಗೆ ಅಧಿಕಾರವನ್ನು ಒಂದೇ ಇಲಾಖೆಗೆ ವಹಿಸಿ

ಕೊಡಲು ಸಾಧ್ಯವಾಗುವಂತೆ ಸದರಿ ನಿಯಮದ ಜೊತೆ ಅಧ್ಯಾಯವನ್ನು ತೆಗೆದುಹಾಕಲು ತೀವ್ರವಾಗಿ ಪರಿಗಣಿಸುತ್ತಿದೆ. ಅದಲ್ಲದೆ ಸದರಿ ನಿಯಮವನ್ನು ತಿದ್ದುಪಡಿ ಮಾಡಿ, ತಪ್ಪಿತಸ್ಥರನ್ನು ಹಿಡಿದು, ಕಾಯಿದೆಯ ಚೌಕಟ್ಟಿನಲ್ಲಿ ತರಲು ಸಹಾ ಉದ್ದೇಶಿಸಲಾಗಿದೆ.

ಶ್ರೀ ಜಿ. ರಾಜೂಗೌಡ.—ಅಧ್ಯಕ್ಷರೇ, ಒಂದು ಘನ ಮೀಟರ್ ಕಪ್ಪು ಕಲ್ಲಿಗೆ ಸುಮಾರು ೧೫ ಸಾವಿರ ರೂಪಾಯಿ ಬೆಲೆ ಬಾಳುತ್ತಿದ್ದು, ಅದರ ಸಾಗಾಣಿಕೆ ಮೇಲೆ ಸರ್ಕಾರ ನಿರ್ಬಂಧ ಮಾಡಿದ್ದರೆ ಆಯವ್ಯಯದಲ್ಲಿ ಏನು ಕೊರತೆ ಇದೆ ಅದನ್ನು ತೋರಿಸುವುದಕ್ಕಾಗುತ್ತಿರಲಿಲ್ಲ. ಹಿಂದಿನ ಮದ್ರಾಸು ಪ್ರಾಂತ್ಯದಲ್ಲಿನ ಖಾಸಗೀ ಜಮೀನಿನಲ್ಲಿ ಕಲ್ಲು ತೆಗೆಯಲು ಪರವಾನಿಗೆ ಕೊಡಬಹುದೆಂದೂ ಇದೆ. ಈ ಪ್ರಕಾರ ಕಂದಾಯ ಇಲಾಖೆಯವರು ೧೯೬೬ ರಿಂದ ಗುತ್ತಿಗೆ ಕೊಡುತ್ತಿದ್ದಾರೆ. ಇದರಿಂದಾಗಿ ಸರ್ಕಾರಕ್ಕೆ ಬರುವ ಕೋಟ್ಯಾಂತರ ರೂಪಾಯಿ ತಪ್ಪಿಹೋಗಿದೆ. ಹೀಗೆ ಆಗುವುದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇವತ್ತು ಒಂದು ಮೀಟರ್ ರಾಜಸ್ವ ಏನು ಕೊಡಲಾಗುತ್ತಿದೆ ಅದನ್ನು ಒಂದು ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡುವುದಕೆ ಸಾಧ್ಯವಿಲ್ಲವೇ? ಅರಣ್ಯ ಭೂಮಿಯಲ್ಲಿ ಸಂತ್ರಿಲೂ ೧ ಕಿ. ಮೀ. ವರೆಗಿನ ಭೂಮಿಯಲ್ಲಿ ಪರವಾನಿಗೆ ಕೊಡತಕ್ಕ ನಿಯಮಕ್ಕೆ ನಿರ್ಬಂದ ಮಾಡುತ್ತೀರಾ? ಇವತ್ತು ನಂಜನಗೂಡಿನಲ್ಲಿ ಅನೇಕ ಕಾರ್ಖಾನೆಗಳು ಕಲ್ಲುಗಳನ್ನು ಸಾಗಾಣಿಕೆ ಮಾಡುತ್ತಿದ್ದು ಇದನ್ನು ಕೂಡಲೇ ನಿಲ್ಲಿಸಬೇಕಾಗಿದೆ. ಇದನ್ನು ಯಾವ ರೀತಿ ಮಾಡುತ್ತೀರಿ? ಚಾಮರಾಜನಗರ ಹಾಗೂ ಯಳಂದೂರು ತಾಲ್ಲೂಕಿನಲ್ಲಿ ನಮ್ಮ ಅರಣ್ಯ ಇಲಾಖೆಯ ಅಧಿಕಾರಿಗಳು, ಭೂಮಾಪನ ಇಲಾಖೆಯ ಅಧಿಕಾರಿಗಳು ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಒಳಸಂಚು ಮಾಡಿ ಖಾಸಗಿಯವರಿಗೆ ಕಲ್ಲು ತೆಗೆಯಲು ಅವಕಾಶ ಕೊಟ್ಟಿದ್ದು, ಇವರ ಮೇಲೆ ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು.—ನೀವು ಇದನ್ನೆಲ್ಲಾ ಆಯವ್ಯಯದ ಮೇಲೆ ಮಾತನಾಡಿ.

ಶ್ರೀ ಜಿ. ರಾಜೂಗೌಡ.—ನೀವು ಅದಕ್ಕೆ ಅವಕಾಶವನ್ನೇ ಕೊಡಲಿಲ್ಲವಲ್ಲ. ಭೂಗರ್ಭದಿಂದ ಬರತಕ್ಕ ಕಲ್ಲು ವಿದೇಶಕ್ಕೆ ಯಾತ್ರೆ ಮಾಡತಕ್ಕ ಕಾಲದಲ್ಲಿ ಪ್ರತಿಯೊಂದು ಕಡೆಯೂ ದುಡ್ಡನ್ನು ಸುರಿಸಿ ಕೊಂಡು ಹೋಗುತ್ತಿವೆ. ಇಂತಹ ಅಮೂಲ್ಯ ವಸ್ತುವಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳ ನಷ್ಟವಾಗುತ್ತಿದೆ. ಈ ಮೂರೂ ಇಲಾಖೆಯ ಅಧಿಕಾರಿಗಳು ಏನು ಆಕ್ರಮ ಮಾಡುತ್ತಿದ್ದಾರೆ ಅವರ ಮೇಲೆ ಕಾನೂನು ರೀತ್ಯ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಅಧ್ಯಕ್ಷರೇ, ಕೊಳ್ಳೇಗಾಲ ತಾಲ್ಲೂಕಿನ ಚೆಂದವಳ್ಳಿ ಗ್ರಾಮದಲ್ಲಿನ ಸರ್ವೆ ನಂ. ೪೧ ಹಾಗೂ ೪೩ರಲ್ಲಿ ಕಂದಾಯ ಇಲಾಖೆಯವರು ಗುತ್ತಿಗೆ ರೂಪದಲ್ಲಿ ಕೊಟ್ಟಿದ್ದಾರೆ. ಅಲ್ಲಿ ಸುಮಾರು ೬೦ ಎಕರೆ ಜಾಗದಲ್ಲಿ ಕಪ್ಪು ಕಲ್ಲನ್ನು ತೆಗೆದು ಹೊರಕ್ಕೆ ಸಾಗಿಸುತ್ತಿದ್ದಾರೆ. ಕಂದಾಯ ಇಲಾಖೆಯವರು ಕೊಡುವುದನ್ನು ತಪ್ಪಿಸುವುದಕ್ಕೆ ಇಷ್ಟು ದಿವಸ ಏಕೆ ವಿಳಂಬ ಮಾಡಿದ್ದೀರಿ? ಕಂದಾಯ ಇಲಾಖೆಯವರು ಇವರಿಗೆ ಗುತ್ತಿಗೆ ಕೊಟ್ಟು ನಂತರ ಪಟ್ಟಾ ಕೂಡಾ ಕೊಟ್ಟಿದ್ದಾರೆ. ಇದನ್ನು ತಪ್ಪಿಸಲು ಯಾವ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಡಿ. ಟಿ. ಜಯಕುಮಾರ್.—ಅಧ್ಯಕ್ಷರೇ, ಈ ಬಗ್ಗೆ ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ವಿವರ ಬಿಟ್ಟರೇನೂ ಸಾಲದು. ಸರ್ಕಾರಕ್ಕೆ ಸುಮಾರು ೬೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ನಷ್ಟವಾಗತಕ್ಕ ವಿಚಾರವಿದ್ದಾದರಿಂದ ಇದು ಬಹಳ ಮಹತ್ವದ ವಿಚಾರವಾಗಿದೆ. ಮಾರ್ಚಿ ೧೯೮೦ರ ತಾರೀಖಿನ ''ಸುಧಾ'' ವಾರಪತ್ರಿಕೆಯಲ್ಲಿ ''ಕರ್ನಾಟಕದ ಡಾಲರ್ ಬಂಡೆ'' ಎಂಬ ಲೇಖನ ಪ್ರಕಟವಾಗಿದ್ದು, ಇದರಲ್ಲಿ ಈ ಕಪ್ಪು ಕಲ್ಲಿನ ಪೂರ್ಣ ವಿಷಯ ಪ್ರಕಟವಾಗಿರುತ್ತದೆ. ಆದ್ದರಿಂದ ಈ ವಿಷಯವನ್ನು ಗಮನ ಸೆಳೆಯುವಂತ ಸೂಚನೆಯ ಮೂಲಕ ಪ್ರಸ್ತಾಪ ಮಾಡಲು ಸಾಧ್ಯವಿಲ್ಲ. ತಾವು ದಯವಿಟ್ಟು ಈ ವಿಷಯವನ್ನು ನಿಯಮ ೫೮ ಅಥವಾ ೬೮ರ ಕೆಳಗೆ ಸಮಗ್ರವಾಗಿ ಚರ್ಚೆ ಮಾಡಲು ಒಂದು ಗಂಟೆ ಅಥವಾ ಅರ್ಧ ಗಂಟೆ ಅವಕಾಶ ಮಾಡಿಕೊಡಬೇಕು. ಸುಮಾರು ೬೦ ಕೋಟಿ ರೂಪಾಯಿಗಳು ಸರ್ಕಾರಕ್ಕೆ ಬರತಕ್ಕ ವಿಷಯವಾದ್ದರಿಂದ ಈ ಬಗ್ಗೆ ಗಮನ ಹರಿಸಿ ಹೆಚ್ಚು ಚರ್ಚೆ ನಡೆಸಲು ಅವಕಾಶ ಮಾಡಿಕೊಡಬೇಕೆಂದು ಈ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಆ ಬಗ್ಗೆ ತಾವು ನೋಟೀಸ್ ಕೊಡಿ.

೧೨-೩೦ ಪಿ. ಎಂ.

**ಶ್ರೀ ಎಂ. ಶಿವಣ್ಣ.**—ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಶ್ರೀ ಬಂಗಾರಪ್ಪನವರು ಮಾತನಾಡ ತಕ್ಕಂಥ ಸಂದರ್ಭದಲ್ಲಿ ಇದನ್ನು ಖಾಸಗಿಯವರಿಗೆ ಕೊಡಬಾರದು ಎಂದು ಹೇಳಿದ್ದಾರೆ. ಖಾಸಗಿಯವರು ಮೂರು ಜನರಿಗೆ ಕೊಟ್ಟಿದ್ದರೂ ಕೂಡ ಸುಮಾರು ೭೦-೮೦ ಜನ ಬೇರೆ ಬೇರೆ ಹೆಸರುಗಳಲ್ಲಿ ಈ ಶಿಲೆಗಳನ್ನು ತೆಗೆಯುತ್ತಿದ್ದು ಸರ್ಕಾರಕ್ಕೆ ೫೦-೬೦ ಕೋಟಿ ರೂಪಾಯಿಗಳಷ್ಟು ನಷ್ಟ ಆಗಂವುದಕ್ಕೆ ಕಾರಣರಾಗಿದ್ದಾರೆ. ಕಳೆದ ತಿಂಗಳಲ್ಲಿ ನನಗೆ ತಿಳಿದು ಬಂದಿರುವ ಪ್ರಕಾರ ಯಾರೋ ಒಬ್ಬರ ಹೆಸರಿಗೆ ೧ ಕೋಟಿ ೪೦ ಲಕ್ಷ ರೂಪಾಯಿಗಳಿಗೆ ಜಪಾನ್ ದೇಶದಿಂದ ಚೆಕ್ ಬಂದಿದೆ ಎಂದು ನಾನು ತಿಳಿದು ಕೊಂಡಿದ್ದೇನೆ. ಇಷ್ಟೆಲ್ಲಾ ಹಗರಣ ಆಗುತ್ತಿದ್ದರೂ ಕೂಡ ಮೈಸೂರು ಜಿಲ್ಲೆಯಲ್ಲಿ ಮತ್ತು ಅನೇಕ ಕಡೆಗಳಲ್ಲಿ ಈ ಕಪ್ಪು ಶಿಲೆ ತೆಗೆಯುವುದರಿಂದ ರಾಜ್ಯಕ್ಕೆ ಭಾರಿ ನಷ್ಟ ಆಗುತ್ತಿದೆ. ಮಂಗಳೂರು ಬಂದರಿನಲ್ಲಿ ಕೂಡ ಕೊಟ್ಯಾಂತರ ರೂಪಾಯಿ ಬೆಲೆಬಾಳುವ ಶಿಲೆಗಳು ರಫ್ತು ಆಗಂವ ಹಂತದಲ್ಲಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅಲ್ಲಿ ತಿಂಗಳಿಗೆ ಹತ್ತು ಸಾವಿರ ಟನ್‌ನಷ್ಟು ಶಿಲೆಗಳು ರಫ್ತು ಆಗುತ್ತಿವೆ. ಇಷ್ಟಾದರೂ ಸರ್ಕಾರ ಸುಮ್ಮನಿದೆ. ಮಾನ್ಯ ಸಚಿವರು ಹಾಗೂ ನಮ್ಮ ಜಿಲ್ಲೆಯ ಅಧಿಕಾರಿಗಳು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ ಇದರ ಹಿಂದುಗಡೆ ಪ್ರಭಾವಿ ವ್ಯಕ್ತಿಗಳು ಕ್ರಮ ತೆಗೆದುಕೊಳ್ಳತಕ್ಕಂಥ ಅಧಿಕಾರಿಯನ್ನು ಅಂದರೆ ಅಸಿಸ್ಟೆಂಟ್ ಕಮಿಷನರ್, ಹಾಗೂ ಇತರ ಐ.ಎ.ಎಸ್. ಅಧಿಕಾರಿಗಳನ್ನು ವರ್ಗಾವಣೆ ಮಾಡಬೇಕೆಂದು ಪಿತೂರಿ ನಡೆಸುತ್ತಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ.

**ಅಧ್ಯಕ್ಷರು.**—ನಾನು ನಿಮಗೆ ಕ್ಲಾರಿಫಿಕೇಶನ್ ಕೇಳುವುದಕ್ಕೆ ಅವಕಾಶ ಕೊಟ್ಟಿದೆ. ಈಗ ಮಾನ್ಯ ಜಯಕುಮಾರ್, ರಾಜುಗೌಡರು, ಹಾಗೂ ಚಿಕ್ಕಬೋರಯ್ಯನವರು ಎಷ್ಟು ಚೆನ್ನಾಗಿ ಕೇಳಿದರು. ನೀವು ಹಾಗೆ ಕೇಳಿ.

**ಶ್ರೀ ಎಂ. ಶಿವಣ್ಣ.**—ಶ್ರೀ ಜಯಕುಮಾರ್ ಅವರು ಹೇಳಿದ ಹಾಗೆ ಇದರ ಬಗ್ಗೆ ಅರ್ಧಗಂಟೆ ಚರ್ಚೆಯಾದರೆ ಒಳ್ಳೆಯದೆಂದು ನಾನು ಕೂಡ ಅಭಿಪ್ರಾಯ ಪಡುತ್ತೇನೆ.

**ಶ್ರೀ ಬಿ. ರಾಚಯ್ಯ.**—ಮಾನ್ಯ ಅಧ್ಯಕ್ಷರೇ, ಈ ಭೂಮಿಯಲ್ಲಿರತಕ್ಕಂಥ ಕಪ್ಪುಶಿಲೆಯನ್ನು ತೆಗೆಯುವುದು ನನ್ನ ತಾಲ್ಲೂಕಿನಲ್ಲಿ ಕೂಡ ಹೆಚ್ಚಾಗಿದೆ. ಮತ್ತೆ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಹಾಗೂ ಯಳಂದೂರು ತಾಲ್ಲೂಕಿನಲ್ಲಿ ಹಿಂದೆ ಇದ್ದಂಥ ಸರ್ಕಾರ ಕೆಲವು ಖಾಸಗಿಯವರಿಗೆ ಈ ಕಪ್ಪು ಕಲ್ಲನ್ನು ತೆಯುವುದಕ್ಕೆ ಪರವಾನಗಿಯನ್ನು ಕೊಟ್ಟಿದ್ದರು. ಅದರ ಅವಧಿ ಮುಗಿದ ಮೇಲೆ ಅವರು ಹೈಕೋರ್ಟಿಗೆ ಹೋಗಿದ್ದರು. ಅಲ್ಲಿ ಅವಕಾಶ ಸಿಗದಿದ್ದಾಗ, ಅವರು ಅಲ್ಲಿಂದ ಸುಪ್ರೀಂ ಕೋರ್ಟಿಗೂ ಹೋದರು. ಸುಪ್ರೀಂ ಕೋರ್ಟಿನವರು ಅವರ ಅರ್ಜಿಯನ್ನು ಎಕ್ಸಟೆಂಡ್ ಮಾಡುವುದಕ್ಕೆ ಆಗುವುದಿಲ್ಲವೆಂದು ವಜಾ ಮಾಡಿದ್ದಾರೆ. ಅದು ಆದಮೇಲೆ ಕೆಲವು ಖಾಸಗಿಯವರು ಖಾಸಗಿ ಜಮೀನುಗಳನ್ನು ಕೊಂಡುಕೊಂಡು ಅಲ್ಲಿ ಅನಧಿಕೃತವಾಗಿ ಈ ಶಿಲೆಯನ್ನು ತೆಗೆಯುತ್ತಿದ್ದಾರೆ. ಕೆಲವು ಹೊಸದಾಗಿ ಬಂದಿರತಕ್ಕ ಅಸಿಸ್ಟೆಂಟ್ ಕಮಿಷನರ್ ಮತ್ತು ಹೊಸದಾಗಿ ಬಂದ ಜಿಲ್ಲಾಧಿಕಾರಿಗಳು, ಪತ್ರಿಕೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಮಾನ್ಯ ಮಂತ್ರಿಗಳ ಸಂಪರ್ಕದಿಂದ ಇದು ನಡೆಯುತ್ತಿದೆ ಎಂದು ಸ್ಥಳೀಯ ಪತ್ರಿಕೆಯಲ್ಲಿ ಬಂದಮೇಲೆ, ವಿಚಾರ ಕೇಳಿದ ಮೇಲೆ ಇದು ಬಹುಶಃ ೮೦ರಷ್ಟು ಜನ ಖಾಸಗಿ ಭೂಮಿಗಳಲ್ಲಿ ಈ ಕಲ್ಲು ತೆಗೆಯುತ್ತಿರುವುದನ್ನು ನಿಲ್ಲಿಸಬೇಕೆಂದು ಹೋಗಿ ನಿಲ್ಲಿಸಿದ್ದಾರೆ ಮತ್ತು ಅವರನ್ನು ವರ್ಗ ಮಾಡತಕ್ಕದಾಗಲೀ, ಅಥವಾ ಬೇರೆ ಕಡೆಗೆ ಹಾಕುವುದಾಗಲೀ ಅವಶ್ಯಕತೆ ಇರುವುದಿಲ್ಲ. ನಾನು ಕೂಡ ಇದು ಅಕ್ರಮವಾಗಿ ನಡೆಯುತ್ತಿದೆ, ಇದನ್ನು ನಿಲ್ಲಿಸಬೇಕೆಂದು ಹೇಳಿ ಬಂದಿದ್ದೇನೆ. ಯಾರಾದರೂ ಕಾಯಿದೆ ಪ್ರಕಾರ ಪರವಾನಗಿಯನ್ನು ಪಡೆದಿದ್ದರೆ, ಅವರಿಗೆ ಅವಕಾಶ ಇದೆ. ಆದರೆ ಸರ್ಕಾರಿ ಭೂಮಿಯಲ್ಲಾಗಲೀ ಅಥವಾ ಖಾಸಗಿ ಭೂಮಿಯಾಗಲೀ ಇರತಕ್ಕಂಥ ಖನಿಜಸಂಪತ್ತು ಏನಿದೆ, ಅದನ್ನು ತೆಗೆಯಬೇಕಾದರೆ ಜಿಯಾಲಾಜಿಕಲ್ ಡಿಪಾರ್ಟ್‌ಮೆಂಟ್‌ನವರು ಪರವಾನಗಿಯನ್ನು ಕೊಡಬೇಕು. ಕೊಳ್ಳೇಗಾಲ ತಾಲ್ಲೂಕಿನಲ್ಲಿ ಹಿಂದಿನ ರೆವಿನ್ಯೂ ರೆಕಾರ್ಡ್ ಪ್ರಕಾರ ತಹಸೀಲ್ದಾರರು, ಅಸಿಸ್ಟೆಂಟ್ ಕಮಿಷನರ್, ಡೆಪ್ಯೂಟಿ ಕಮಿಷನರ್ ಅವರು ಪರವಾನಗಿಯನ್ನು ಕೊಡುವುದಕ್ಕೆ ಅವಕಾಶ ಇದೆಯೆಂಬ ನೋಟ್ ಕೆಳಗಡೆ ಪರವಾನಗಿಯನ್ನು ಕೊಟ್ಟಿದ್ದಾರೆಯೆಂದು ತಿಳಿದು ಬಂದಿದೆ. ಅದಕ್ಕೋಸ್ಕರ ಸರ್ಕಾರ ಸಮಗ್ರ

ವಾಗಿ ಚಿಂತನೆ ಮಾಡಿ ಯಾರ್ಯಾರು ಕಾನೂನನ್ನು ದುರುಪಯೋಗಮಾಡಿಕೊಂಡಿದ್ದಾರೆ, ಅವರ ಮೇಲೆ ಆರಣ್ಯ ಇಲಾಖೆಯಾಗಲೀ ರೆವಿನ್ಯೂ ಇಲಾಖೆಯಾಗಲೀ ಸಮಗ್ರವಾಗಿ ವಿಚಾರಣೆ ನಡೆಸಿ ಕ್ರಮ ತೆಗೆದು ಕೊಳ್ಳುತ್ತಾರೆ. ಮತ್ತು ಇನ್ನುಮುಂದೆ ವಿಕ್ರೂಪದಲ್ಲಿ ಪರವಾನಗಿಯನ್ನು ಕೊಡುವುದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ. ಈ ದೃಷ್ಟಿಯಿಂದ ಇದುವರೆಗೂ ಯಾರು ಹೇಳಿರಲಿಲ್ಲ. ಕಲ್ಲುಂಗಳ ಪ್ರದರ್ಶನ ಇತ್ತೀಚೆಗೆ ನಡೆದ ಮೇಲೆ ಇದು ನಮ್ಮ ಭಾಗದಿಂದ ಬರುತ್ತದೆ ಎಂದು ಅರ್ಥವಾಯಿತು. ಅದು ಎಲ್ಲೆಲ್ಲಿಂದ ಬರುತ್ತದೆ, ಆದನ್ನು ನಿಲ್ಲಿಸಬೇಕು. ೫೦-೬೦ ಕೋಟಿ ರೂಪಾಯಿ ಬೆಲೆಬಾಳತಕ್ಕಂಥ ಕಲ್ಲು ಹೊರಗೆ ಹೊಗುತ್ತಿದೆ. ಇದರಿಂದ ಹಾನಿ ನಮ್ಮ ಸರ್ಕಾರಕ್ಕೆ ಆಗುತ್ತಿದ್ದರೆ ಅದನ್ನು ನಿಲ್ಲಿಸಿ ಏಕ ರೂಪವಾಗಿರತಕ್ಕಂಥ ಕಾನೂನನ್ನು ಮಾಡಿ ಈ ಕಾಯದೆ ಪ್ರಕಾರ ಒಂದೇ ಇಲಾಖೆ ಪರವಾನಗಿ ಕೊಡ ಬೇಕೇ ವಿನಹ ಬೇರೆ ಬೇರೆಯವರಿಗೆ ಅಧಿಕಾರವನ್ನು ಕೊಡುವುದರಿಂದ ದುರುಪಯೋಗವಾಗುವಾಗುತ್ತಿವೆ ಎಂದು ಕಂಡು ಬಂದಿದೆ. ಈ ರೀತಿಯಾದ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

**ಅಧ್ಯಕ್ಷರು.**—ಮಾನ್ಯ ರಾಜಂಗೌಡರೇ, ಸರಿಯಾದ ಉತ್ತರವನ್ನು ಮಾನ್ಯ ಸಚಿವರು ಹೇಳಿದಾ ರೆ,

(ಗೊಂದಲ)

ಅಧ್ಯಕ್ಷರು.—ಹೀಗೆ ಮೂರು ಜನರೂ ಒಮ್ಮೆಗೇ ಎದ್ದುನಿಂತರೆ ಏನರ್ಥ ?

(ಗೊಂದಲ)

ಶ್ರೀ ಡಿ. ಟಿ. ಜಯಕುಮಾರ್.—ಅಧ್ಯಕ್ಷರೇ...

ಶ್ರೀ ಜಿ. ರಾಜಗೌಡ.—ಗೃಹಮಂತ್ರಿಗಳು ಮಾತನಾಡುತ್ತಾ, ಹಿಂದಿನ ಸರ್ಕಾರ ಪರವಾನಗಿ ಯನ್ನು ಕೊಟ್ಟಿದೆ ಎಂದು ಹೇಳಿದರು. ೧೯೫೬ರಲ್ಲಿ ಚಾಮರಾಜನಗರ ತಾಲ್ಲೂಕಿನಲ್ಲಿ ಪರವಾನಗಿ ಕೊಟ್ಟಿರತಕ್ಕಂತಾದ್ದು ಈ ಸರ್ಕಾರ. ಇವರ ಅಧಿಕಾರದಲ್ಲಿ ಕೊಟ್ಟಿದೆ. ಇದನ್ನು ಗಮನಿಸಿ, ಮುಂದೆ ಈ ರೀತಿ ಆಗದೇ ಇರುವಂತೆ ಮಾಡಬೇಕು, ಕೋರ್ಟ್ ಆದೇಶ ಇರುವುದು ಕೊಳ್ಳಿಗಾಲಕ್ಕೆ ಮಾತ್ರ ಕೊಡಬೇಕೆಂದು. ಬೇರೆಯವರಿಗೂ ಏಕೆ ಪರವಾನೆ ಕೊಟ್ಟರು ? ಮಾನ್ಯ ಸಚಿವರು ಹೇಳಿಕೆಯಲ್ಲಿ ಒಪ್ಪಿ ಕೊಂಡಿದ್ದಾರೆ.

ಶ್ರೀ ಬಿ. ರಾಚಯ್ಯ.—ನಾನು ಹೇಳಿದ್ದೇನೆ, ರೆವಿನ್ಯೂ ಅಧಿಕಾರಿಗಳಿಗೆ ಕೊಡುವುದಕ್ಕೆ ಅಧಿಕಾರ ಇಲ್ಲ. ಹಳೆಯ ಮೈಸೂರಿನಲ್ಲಿ, ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ ತಾಲ್ಲೂಕುಗಳಿಗೆ ರೆವಿನ್ಯೂ ಕಾಯಿದೆ ಪ್ರಕಾರ ಅವಕಾಶ ಇದೆಯೆಂದು, ಅಲ್ಲಿ ಕೊಟ್ಟಿದ್ದಾರೆ, ಕೊಟ್ಟಿರುವುದು ತಪ್ಪಾಗಿದೆ...

ಶ್ರೀ ಕೆ. ಹೆಚ್. ಪಾಟೀಲ್.—ತಪ್ಪು ಎಂದು ಒಪ್ಪಿಕೊಂಡಮೇಲೆ, ತಪ್ಪು ಮಾಡಿದ, ಹಾನಿ ಮಾಡಿದ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಈಗ ವಿಚಾರಣೆ ನಡೆಯುತ್ತಿದೆ...

(ಗೊಂದಲ)

ಶ್ರೀ ಡಿ. ಟಿ. ಜಯಕುಮಾರ್.—ಈ ವಿಷಯದಲ್ಲಿ ಇನ್ನೂ ಚರ್ಚೆ ಮಾಡುವುದಕ್ಕೆ ವಿಷಯಂಗಳು ಇವೆ. ಆದುದರಿಂದ ತಾವು ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುವ ಭರವಸೆ ಕೊಡಿ.

ಅಧ್ಯಕ್ಷರು.—ತಾವು ನೋಟೀಸ್ ಕೊಡಿ, ವಿಚಾರ ಮಾಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕರ್ನಾಟಕ ರಾಜ್ಯದಲ್ಲಿ ಅತಿ ಹೆಚ್ಚಿನ ಬೆಲೆಯ ಈ ಖನಿಜ ವನ್ನು ಹೊರದೇಶಕ್ಕೆ ಕಳುಹಿಸುತ್ತಿರುವುದು ಗೊತ್ತಿದೆ. ಕೋಟಿಗಟ್ಟಲೆ ಲಾಭ ಮಾಡಿಕೊಳ್ಳುವುದು ಸರ್ಕಾರಕ್ಕೆ ಗೊತ್ತಾದ ಮೇಲೆ, ಈಗಾಗಲೇ ಒಂದು ನಿರ್ಣಯ ಮಾಡಿದ್ದೇವೆ. ಈಗಾಗಲೇ ಖಾಸಗಿ ಅಧಿಕಾರಿಗಳಿಗೆ ಲೈಸೆನ್ಸ್ ಕೊಟ್ಟಿರುವ ಅವಧಿ ಮುಗಿದ ಮೇಲೆ ಮತ್ತೆ ಲೈಸೆನ್ಸ್ ಕೊಡುವುದಿಲ್ಲ. ಸರ್ಕಾರದವರೇ ಎಂ. ಎಲ್. ಮಂಬಾಂತರ ಹೆಚ್ಚಿನ ಲಾಭ ಮಾಡಿಕೊಳ್ಳಲು ಪರಿಶೀಲಿಸುತ್ತಿದೆ. ಖಾಸಗಿಯವರಿಗೆ ಪುನಃ ಲೈಸೆನ್ಸ್ ಕೊಡುವುದಿಲ್ಲವೆಂದು ತಿಳಿಸಿದ ಮೇಲೆ ಅವರು ಹೈಕೋರ್ಟಿಗೆ ಹೋದರು, ಹಾಗೂ ಸುಪ್ರೀಂ ಕೋರ್ಟಿಗೆ ಹೋದರು ಆದರೆ ಜಯ ಸಿಕ್ಕಲಿಲ್ಲ. ಸರ್ಕಾರ ಲೈಸೆನ್ಸ್ ಕೊಟ್ಟಿಲ್ಲ, ರೆವಿನ್ಯೂ ಅಧಿಕಾರಿಗಳು ಲೈಸೆನ್ಸ್ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಈ ಬಗ್ಗೆ ತನಿಖೆ ಮಾಡಿಸುತ್ತೇವೆ. ತಪ್ಪಿತಸ್ಥರ ಮೇಲೆ ಉಗ್ರವಾದ ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಎಂ. ಶಿವಣ್ಣ.**—ಅಧ್ಯಕ್ಷರೇ.....

**ಅಧ್ಯಕ್ಷರು.**—ಮಾನ್ಯ ಶಿವಣ್ಣನವರೇ, ನಿಮಗೆ ಸ್ವಲ್ಪ ಅವಕಾಶ ಕೊಟ್ಟರೆ, ದುರುಪಯೋಗ ಮಾಡಿಕೊಳ್ಳುತ್ತಿದ್ದೀರಿ. ಸಚಿವರು ಸಮರ್ಪಕವಾದ ಉತ್ತರ ಕೊಟ್ಟಿದ್ದಾರೆ, ನಿಮಗೆ ಇನ್ನೂ ಸಮಾಧಾನ ಇಲ್ಲವೇ ? ದಯವಿಟ್ಟು ತಾವು ಕುಳಿತುಕೊಳ್ಳಿ.

**ಶ್ರೀ ಎಂ. ಶಿವಣ್ಣ.**—ಮದ್ಯಾಸ್ ಪ್ರಾಂತ್ಯಕ್ಕೆ ಪರವಾನಗಿಯನ್ನು ಕೊಟ್ಟಿದೆ ಎಂದು ಹೇಳಿದ್ದಾರೆ. ಚಾಮರಾಜನಗರ ತಾಲ್ಲೂಕಿನ ಕೆಲವು ಹಳ್ಳಿಗಳಿಗೂ ಲೈಸೆನ್ಸ್ ಕೊಟ್ಟಿದ್ದಾರೆ, ಶಿವಪುರ, ಉತ್ತಿನಹಳ್ಳಿ, ಬಸವಾಪುರ, ಕೊತ್ತಲವಾಡಿ ಪುತ್ತೂರು, ಕೆಂಪಾಪುರ, ಮತ್ತು ಜ್ಯೋತಿಗೌಡನಪುರ ಮುಂತಾದ ಹಳ್ಳಿಗಳಲ್ಲಿ ಕೊಟ್ಟಿದ್ದಾರೆ, ಇವೆಲ್ಲಾ ಚಾಮರಾಜನಗರ ತಾಲ್ಲೂಕಿಗೆ ಸೇರಿದ ಹಳ್ಳಿಗಳು. ಮದ್ರಾಸ್ ಪ್ರಾಂತ್ಯಕ್ಕೆ ಸೇರಿಲ್ಲ. ಇವುಗಳ ಬಗ್ಗೆ ಏನು ಹೇಳುತ್ತೀರಿ ?

**ಶ್ರೀ ಎಸ್. ಆರ್. ಬೊಮ್ಮಾಯಿ.**—ಈ ಬಗ್ಗೆ ಸಮಗ್ರವಾದ ತನಿಖೆ ಮಾಡಿಸುತ್ತೇನೆ, ತಪ್ಪಿ ತಸ್ಥರ ಮೇಲೆ ಕ್ರಮಕೈಗೊಳ್ಳುತ್ತೇನೆ. ಮುಂದೆ ವಿವಿಧ ಇಲಾಖೆಯವರು ಪರವಾನಗಿಯನ್ನು ಕೊಡುವುದನ್ನು ನಿಲ್ಲಿಸಿ, ಒಂದೇ ಇಲಾಖೆಯವರು ಕೊಡುವಂಥ ವ್ಯವಸ್ಥೆ ಮಾಡಲಾಗುವುದು.

**ಶ್ರೀಮತಿ ಕೆ. ಎಸ್.** ನಾಗರತ್ನಮ್ಮ. - ಚಾಮರಾಜನಗರ ತಾಲ್ಲೂಕಿನಲ್ಲಿ ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಗಳು ಒಂದೇ ಡಿಪಾರ್ಟ್‌ಮೆಂಟ್ ಮುಖಾಂತರ ಕೊಡಿಸುತ್ತೇನೆಂದು ಹೇಳುತ್ತಿದ್ದಾರೆ. ಇಲ್ಲಿ ಇಷ್ಟೆಲ್ಲಾ ಆಗಬೇಕಾದರೆ, ಅವರು ಬರಬೇಕು. ಮಂತ್ರಿಗಳ ಹತ್ತಿರ ವಶೀಲಿಬಾಜಿ ಮಾಡಬೇಕು, ಆನಂತರ ಇವರು ಕೊಡಿ ಎಂದು ಹೇಳಿದ ಮೇಲೆ ಅವರು ಕೊಡಬೇಕು. ಇವತ್ತು ಸುಮ್ಮನೇ ವಿಚಾರಿಸುತ್ತೇನೆ, ಕ್ರಮ ತೆಗೆದುಕೊಳ್ಳುತ್ತೇನೆ. ಎಂದು ಹೇಳಿದರೆ ಏನು ಪ್ರಯೋಜನ ?

**ಶ್ರೀ ಎಸ್. ಆರ್. ಬೊಮ್ಮಾಯಿ.**—ಮಾನ್ಯ ವಿರೋಧ ಪಕ್ಷದ ನಾಯಕಿಯವರಿಗೆ ಹೇಳ ಬೇಕೆಂದರೆ ಇದರಲ್ಲಿ ಯಾವ ವರ್ಚಸ್ಸಿನಿಂದಲೂ ಸಹ ಅನುಮತಿ ಕೊಟ್ಟಿಲ್ಲ. ಹಿಂದೆ ಕೊಟ್ಟಂಥವು ಗಳನ್ನು ನಾವು ನಿಲ್ಲಿಸಿದ್ದೇವೆ. ಆದನ್ನು ಮುಂದುವರಿಸುತ್ತಿಲ್ಲ. ಜಿಲ್ಲಾಧಿಕಾರಿಗಳು ಮತ್ತು ಅಸಿಸ್ಟೆಂಟ್ ಕಮಿಷನರ್‌ರವರು ಇದನ್ನು ನಿಲ್ಲಿಸಿದ್ದಾರೆ. ಅವರಿಗೆ ಆದೇಶ ಕೊಟ್ಟಿದ್ದೇವೆ. ಈ ರೀತಿ ಆಗಬಾರದು. ಹಿಂದಿನವರ ಬಗ್ಗೆ ವಿಚಾರಣೆ ಮಾಡುತ್ತೇವೆ.

**ಶ್ರೀ ಬಿ. ರಾಚಯ್ಯ.**—ಯಾರಿಗೆ ಹಿಂದೆ ಪರವಾನಗಿ ಕೊಟ್ಟಿದ್ದರು ಅವರನ್ನು ನಿಲ್ಲಿಸುವುದಕ್ಕೆ ಆಗಿಲ್ಲ. ಅಕ್ರಮವಾಗಿ ಯಾರು ಯಾರು ಮಾಡಿದ್ದಾರೆ ಅವರನ್ನೆಲ್ಲಾ ನಿಲ್ಲಿಸಿದ್ದೇವೆ. ಆದನ್ನೆಲ್ಲಾ ಸೀಜ್ ಮಾಡಿದ್ದೇವೆ, ನಮ್ಮ ವಿರಿಯಾದಲ್ಲಿ ನಡೆಯುತ್ತಿದೆ ಎಂದು ಹೇಳಿದರಲ್ಲಾ ಅದಕ್ಕೆ ಹಿಂದಿನ ಸರಕಾರದವರು ಪರವಾನಗಿ ಕೊಟ್ಟಿದ್ದಾರೆ. ಬೆಂಗಳೂರಿನವರಿಗೆ, ಮೈಸೂರಿನವರಿಗೆ, ಆಂಧ್ರದವರಿಗೆ, ತಮಿಳಿನವರಿಗೆಲ್ಲಾ ಕೊಟ್ಟಿದ್ದಾರೆ.

(ಗೊಂದಲ)

**ಶ್ರೀ ಎನ್. ಎಂ. ಅಡ್ಯಂತಾಯ.**—ಅವರೂ ನಮ್ಮ ಸರಕಾರದಲ್ಲಿದ್ದರು, ನಮ್ಮ ಪಕ್ಷದಲ್ಲಿದ್ದರು. ಮಂತ್ರಿಗಳಾಗಿದ್ದರು.

**ಅಧ್ಯಕ್ಷರು.**—ಅಡ್ಯಂತಾಯ ಅವರೇ, ಏತಕ್ಕೆ ನೀವು ಇಷ್ಟು ಜೋರಾಗಿ ಮಾತನಾಡುತ್ತಿದ್ದೀರಿ.

## (3) ಕೊಡಗಿನ ಮಿಾಸಲು ಅರಣ್ಯದಲ್ಲಿ ಗುತ್ತಿಗೆದಾರರಿಂದ ಅರಣ್ಯ ಸಂಪತ್ತು ನಾಶವಾಗುತ್ತಿರುವುದು

**ಶ್ರೀಮತಿ ಸುಮಾ ವಸಂತ್** (ವೀರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಕೊಡಗಿನ ಮಿಾಸಲು ಅರಣ್ಯದಲ್ಲಿ ಗುತ್ತಿಗೆದಾರರಿಂದ ಅರಣ್ಯ ಸಂಪತ್ತು ನಾಶವಾಗುತ್ತಿರುವ ಬಗ್ಗೆ, ಅರಣ್ಯ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

**ಶ್ರೀ ಜೆ. ಎಸ್.** ದೇಶಮುಖ್ (ಅರಣ್ಯ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ಗಮನ ಸೆಳೆಯುವ ಸೂಚನೆಗೆ ತಮ್ಮ ಅನುಮತಿಯನ್ನು ಪಡೆದು ಈ ಕೆಳಗಿನ ಹೇಳಿಕೆಯನ್ನು ನೀಡುತ್ತೇನೆ.